(ಶ್ರೀ ಕಡಿದಾಳ್ ಮಂಜಪ್ಪ)

ಕೆಲವು ನಿಯಮಗಳಿವೆ. ರಾಜ್ಯಾಂಗದ ಮೂರನೆಯ ವಿಧಿಯ ಪ್ರಕಾರ ಪೊದಲು ಕೇಂದ್ರದ ಪಾರ್ಲಿಮೆಂಟು ಒಂದು ಕಾನೂನು ಮಾಡಬೇಕು. ಹಾಗೆ ಅದು ಕಾನೂನು ಮಾಡುವಾಗಲೂ ಕೂಡ ಏಕ್‌ದಂ ಮಾಡುವುದಕ್ಕಾಗುವುದಿಲ್ಲ; ರಾಷ್ಟ್ರಾಧ್ಯಕ್ಷರ ಶಿಫಾರಸ್ಸಿರಬೇಕು: ಅದರ ಜೊತೆಗೆ ಯಾವ ಸಂಸ್ಥಾನಕ್ಕೆ ವಿಸ್ತೀರ್ಣ ಕಡಮೆಯಾಗುತ್ತದೋ ಮತ್ತು ಯಾವ ಸಂಸ್ಥಾನಕ್ಕೆ ವಿಸ್ತೀರ್ಣ ಜಾಸ್ತಿಯಾಗುತ್ತದೆಯೋ ಆ ಉಭಯ ಸಂಸ್ಥಾನಗಳ ಶಾಸನ ಸಭೆಗಳು ಈ ವಿಷಯವನ್ನು ಪರ್ಯಾಲೋಚಿಸಿ ಏನು ಪರಿಣಾಮ ವುಂಟಾಗುತ್ತದೆ ಬುದನ್ನು ಮನಗಂಡು ತಮ್ಮ ಅಭಿಪ್ರಾಯವನ್ನು ಕೊಡಬೇಕು.

ಆ ಮಸೂದೆಯನ್ನು ಮಂಡಿಸತಕ್ಕ ಸಂದರ್ಭದಲ್ಲಿ ಅದರಲ್ಲಡಕವಾಗಿರತಕ್ಕ ನಿಯಮಗಳ ವಿಚಾರದಲ್ಲಿ ಸಂಸ್ಥಾನದ ಶಾಸನ ಸಭೆ ಅಭಿಪ್ರಾಯವನ್ನು ವ್ಯಕ್ತ ಪಡಿಸಬೇಕಾಗುತ್ತದೆ. ಆದುದರಿಂದ ಈ ಒಂದು ನಿರ್ಣಯದಲ್ಲಿ ಅಡಕವಾಗಿರತಕ್ಕ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಒಂದು ನಿರ್ಣಯದ ಮೂಲಕ ವ್ಯಕ್ತಪಡಿಸಿದರೆ ಸಾಲದು ಇದಕ್ಕೆ ಬೇರೊಂದು ವಿಧಿ ನಿಯಮವನ್ನು ಪಾಲಿಸಬೇಕು. ಇದೂ ಅಲ್ಲದೆ ಬಳ್ಳಾರಿ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸಬೇಕೆಂಬ ಒಂದು ಸಲಹೆಯನ್ನು ಭಾರತದ ಪ್ರಧಾನ ಮಂತ್ರಿಗಳು ಸಾರ್ವಜನಿಕರ ಮುಂದಿಟ್ಟಿದ್ದಾರೆ. ಈ ಸಂಬಂಧವಾಗಿ ಬಹುಶಃ ಬರುವ ಜೂನ್ ತಿಂಗಳಲ್ಲಿ ಸೇರತಕ್ಕ ಅಧಿವೇಶನದಲ್ಲಿ ಚರ್ಚೆ ನಡೆಯಬೇಕಾಗಿ ಬರಬಹುದು. ಆದ ಕಾರಣ ಈಗಲೇ ಈ ವಿಚಾರದಲ್ಲಿ ಮಾತನಾಡುವುದು ಸೂಕ್ತವಲ್ಲವೆಂದು ಭಾವಿಸಿದ್ದೇನೆ. ಸರ್ಕಾರದ ಪರವಾಗಿ ಅಭಿಪ್ರಾಯವನ್ನು ಕೊಡುವುದಕ್ಕೂ ಸಿದ್ಧವಾಗಿಲ್ಲ. ಈ ದೊಡ್ಡ ಸಮಸ್ಯೆಯ ವಿಚಾರದಲ್ಲಿ ವಿಫಲವಾಗಿ ಚರ್ಚೆ ನಡೆದು ಮಾನ್ಯ ಸದಸ್ಯರ ಅಭಿಪ್ರಾಯ ಸ್ಪಷ್ಟವಾಗಿ ಗೊತ್ತಾದ ಹೊರತು ಸರ್ಕಾರದವರು ಅವರದೇ ಆದ ತೀರ್ಮಾನವನ್ನು ಮಾಡುವುದಕ್ಕಾಗಲಿ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಲಿ ಸಾಧ್ಯವಿಲ್ಲ. ಈ ಕಾರಣದಿಂದ ನಾನು ನಿರ್ದಿಷ್ಟ ಅಭಿಪ್ರಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತು ಈ ನಿರ್ಣಯದಲ್ಲಿ ಸೂಚಿಸಲ್ಪಟ್ಟಿರುವ ವಿಷಯ ರಾಜ್ಯಾಂಗಕ್ಕೆ ವಿರುದ್ಧವಾಗಿದೆಯೆಂದು ನನ್ನ ಭಾವನೆ; ಮತ್ತು ಇದು ಸಾಧ್ಯವಾದುದಲ್ಲವೆಂದೂ, ನನ ಭಾವನೆ. ನಮ್ಮ ಸಂಸ್ಥಾನದಲ್ಲಿರತಕ್ಕ ತೆಲುಗು ಮಾತನಾಡತಕ್ಕ ಬಹು ಮಂದಿ ಜನರಿಗೆ ಮೈಸೂರು ಸಂಸ್ಥಾನದಲ್ಲೇ ಇರಬೇಕೆಂಬ ಭಾವನೆಯಿದೆಯೆಂದು ಅರಿಕೆ ಮಾಡಿಕೊಂಡಿದ್ದೇನೆ. ಈ ಎಲ್ಲಾ ಕಾರಣಗಳಿಂದ ಸೂಚಕರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ವಿ. ನಾರಾಯಣ ರೆಡ್ಡಿ.—ರಾಜ್ಯಾಂಗಕ್ಕೆ ವಿರುದ್ಧವಾಗಿರುವುದರಿಂದ ನನ್ನ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಿಚ್ಛಿಸುತ್ತೇನೆ.

The resolution was, by leave withdrawn.

Mr. SPEAKER.—Resolutions Nos. 32, 82, 95 and 101 are similar to the one now withdrawn.

Next resolution by Sri C. T. Hanumanthaiya.

No. 23. Provision of 50 lakhs of rupees for Famine Relief Works in Madhugiri and Pavagada Taluks.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ನನ್ನ ನಿರ್ಣಯ ಈರೀತಿ ಇದೆ. ಅದನ್ನು ಮಂಡಿಸುತ್ತೇನೆ.

> "ಪಾವಗಡ ತಾಲ್ಲೂಕು ಮತ್ತು ಮಧುಗಿರಿ ತಾಲ್ಲೂಕು ಮಿಡಗೇಶಿ, ಇಟಕದಿಬ್ಬನಹಳ್ಳಿ ಈ ಮೂರು ಹೋಬಳಿಗಳಲ್ಲಿ, ವಿದ್ಯುಚ್ಛಕ್ತಿಗಾಗಿಯೂ, ಒಡೆದು ಹೋಗಿರುವ ಕೆರೆಗಳ ದುರಸ್ತಿಗಾಗಿಯೂ ಮತ್ತು ಕ್ಷಾಮನಿವಾರಣಾ ಕಾಮುಗಾರಿ ಕೆಲಸಗಳಿಗಾಗಿಯೂ ಈ ಸಾಲಿನ ಬಡ್ಜೆಟ್ಟಿನಲ್ಲಿ 50 ಲಕ್ಷ ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಒದಗಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನ ಕೆಲವು ಹೋಬಳಿಗಳಲ್ಲಿ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದೆ ಕೆರೆಗಳು ತುಂಬದೆ ಬಹಳ ಅನಾಹುತವಾಗಿದೆ. ಇದು ಅನೇಕರಿಗೆ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಹಿಂದೆ ಎರಡು ವರ್ಷಗಳಿಂದಲೂ ಹುಲ್ಲು ಮತ್ತು ದವಸವನ್ನು ಒದಗಿಸಿರುವುದು ಸರ್ಕಾರದವರಿಗೆ ಮನವರಿಕೆಯಾಗಿದೆ. ಈ ಸಾರಿಕೂಡ ಅನೇಕ ಕೆರೆಗಳು ತುಂಬದೆ ಫಸಲು ಹೋಗಿದೆ. ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ. ಎಲ್ಲಪ್ಪನಾಯಕನ ಹೊಸಕೋಟೆ ಹೋಬಳಿಯಲ್ಲಿ ಫಸಲು ಅರ್ಧ ಆಗಿ ಕೈಗೆಕೂಡ ಬಂದಿಲ್ಲ. ದನಗಳಿಗೆ ಹುಲ್ಲೂ ಇಲ್ಲದೆ ಸತ್ತುಹೋಗಿವೆ. ಅಲ್ಲಿಗೆ ವಿದ್ಯುಚ್ಛಕ್ತಿಯನ್ನೊದಗಿಸಿಕೊಡಿ, ಬಾವಿಗಳಿಂದ ವ್ಯವಸಾಯ ಮಾಡಲು ಸೌಕರ್ಯಕೊಡಿ ಎಂದು ಅನೇಕ ಸಾರಿ ಸರ್ಕಾರದವರನ್ನು ಪ್ರಾರ್ಥನೆಮಾಡಿಕೊಂಡಿದ್ದೇವೆ, ಅವರು ಭರವಸೆಯನ್ನೂ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿಯನ್ನೇನೋ ಕೆಲವು ಕಡೆ ಕೊಟ್ಟಿದ್ದಾರೆ ಆದರೆ ಅಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ, ಪಾವಗಡ ತಾಲ್ಲೂಕಿನಲ್ಲಿ ಎಲ್ಲಾ ಕಡೆಯೂ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಹೆಚ್ಚು ಜನರು ನೆಮ್ಮದಿಯ ಗಿರುವುದಕ್ಕೆ ಅನುಕೂಲವಾಗುತ್ತದೆ. ಕೆಲವು ಕೆರೆಗಳು ದುರಸ್ತಾಗದೆ ಹಣವಿಲ್ಲದೆ ಕೆಲಸ ಅರ್ಧದಲ್ಲೇ ನಿಂತುಹೋಗಿದೆ. ಆದುದರಿಂದ ಆ ಕೆರೆಗಳ ದುರಸ್ತಿಗಾಗಿ ಹೆಚ್ಚು ದ್ರವ್ಯ ಸಹಾಯಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ; ಮತ್ತು ಮಿಡಗೇಶಿ, ಇಟಕದಿಬ್ಬನಹಳ್ಳಿ, ಕೂಡಿಗೇನಹಳ್ಳಿ ಈ ಮೂರು ಹೋಬಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಿದರೆ ಹೆಚ್ಚು ಆಹಾರವನ್ನು ಬೆಳೆಯುತ್ತೇವೆಂದು ಅಲ್ಲಿನವರು ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದಾರೆ. ಇಟಕದಿಬ್ಬನಹಳ್ಳಿ ಮತ್ತು ಮಿಡಗೇಶಿ ಹೋಬಳಿಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಿದೆ. ಈಗ ಅಲ್ಲಿ ಅನೇಕ ಜನರು ಆಹಾರವಿಲ್ಲದೆ ಕಷ್ಟಪಡುತ್ತಿದ್ದಾರೆ. ಅನೇಕರು ಊರುಬಿಟ್ಟು ಬೇರೆ ಕಡೆ ಹೋಗುತ್ತಿದ್ದಾರೆ. ಇದನ್ನು ನಿವಾರಿಸಬೇಕು.

Mr. SPEAKER.—Resolution moved :

"That this Assembly is of the opinion that a sum of not less than fifty lakhs of rupees should be provided in this year's Budget for supplying electricity, for repairing breached tanks and for famine relief works in the three hoblies of Midigesi, Itakadibbanahalli and Kodigenahalli of Madhugiri Taluk and Pavagada Taluks."

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಮಂತ್ರಿಗಳು).—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿ ಕ್ಷಾಮ ಪರಿಹಾರಕ್ಕೆ ಮತ್ತು ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಎಷ್ಟೆಷ್ಟು ಹಣವನ್ನೊದಗಿಸಲಾಗಿದೆ ಎಂಬುದನ್ನು ಹಿಂದೆ ಅನೇಕ ಸಂದರ್ಭಗಳಲ್ಲಿ ತಿಳಿಸಿದ್ದೇನೆ. ಈಗ ಪುನಃ ಹೊಸದಾಗಿ ಅಂಕಿ ಅಂಶಗಳನ್ನು ಕೊಡತಕ್ಕ ಅವಶ್ಯಕತೆಯಿಲ್ಲವೆಂದು ನಂಬಿದ್ದೇನೆ. ಮಾನ್ಯ ಸದಸ್ಯರು ಈ ನಿರ್ಣಯದ ಮೂಲಕ 50 ಲಕ್ಷ ರೂಪಾಯಿಗಳನ್ನು ಕ್ಷಾಮ ಪರಿಹಾರಕ್ಕೆ, ಕೆರೆಗಳ ರಿಪೇರಿಗೆ ಮತ್ತು ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಕೊಡಬೇಕೆಂದು ಕೇಳಿದ್ದಾರೆ. ಸಾಧ್ಯವಾದ ಮಟ್ಟಿಗೂ ಅಭಾವ ಪ್ರದೇಶದಲ್ಲಿ ಸರ್ಕಾರದವರು ಹೆಚ್ಚು ಹಣವನ್ನು ಖರ್ಚುಮಾಡುವುದಕ್ಕೆ ಪ್ರಯತ್ನಪಡುತ್ತಾರೆಂದು ಭರವಸೆ ಕೊಟ್ಟಮೇಲೆ ಮಾನ್ಯ ಸದಸ್ಯರು ತಮ್ಮ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri C. T. HANUMANTHAIYA.—I seek leave of the House and withdraw my resolution.

The resolution was, by leave withdrawn.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ನಾನು ನನ್ನ 27 ನಂಬರಿನ ನಿರ್ಣಯವನ್ನು ಮಂಡಿಸಲು ಇಷ್ಟಪಡುವುದಿಲ್ಲ.

No. 28.—Recommendation to the Centre to construct a Railway line to Coorg either from Mysore City or Krishnarajanagar.

Sri D. DEVARAJ URS (Hunsur).—Sir, I beg to move : ....

Sri V. M. MASCARENHAS (St. John's Hill).—Sir, the resolution deals with a central subject. The Government of Mysore has nothing to do with regard to Railways.

*ಶ್ರೀ ಡಿ. ದೇವರಾಜ ಅರಸ್.—ನನ್ನ ನಿರ್ಣಯ ಈ ರೀತಿ ಇದೆ :—

"This Assembly is of the opinion that the State Government should recommend to the Government of India to put a railway line to Coorg either from Mysore City or Krishnarajanagar."

ಸ್ವಾಮಿ, ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವೆಂದು ಅಪ್ಪಣೆಕೊಡಿಸಿದರು. ನಾನು ಈ ನಿರ್ಣಯದಲ್ಲಿ ಕೇಳುತ್ತಿರುವುದು, ನಮ್ಮ ಸರ್ಕಾರದವರ ಕೈಯಲ್ಲಿ ರೈಲ್ವೆ ಇಲ್ಲವೆಂಬುದು ನನಗೆ ಗೊತ್ತಿದೆ, ಆದರೂ, ಶಿಫಾರಸುಮಾಡಬೇಕೆಂಬ ವಿಚಾರವನ್ನು ಒತ್ತಾಯಪಡಿಸಿ ಸರ್ಕಾರದವರು ಒಪ್ಪಿಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಸೂಚಿಸಿದ್ದೇನೆ. ಇವರ ವಿಚಾರದಲ್ಲಿ ಹೆಚ್ಚು ದೀರ್ಘವಾಗಿ ಭಾಷಣಮಾಡಬೇಕಾಗಿಲ್ಲವೆಂದು ಗೊತ್ತಿದೆ, ಸಣ್ಣ ಪುಟ್ಟ ವಿಚಾರ ಒಂದೆರಡು ಹೇಳುವುದಾದರೆ, ಈಗ ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ಈಚೆಗೆ ಕೊಡಗಿನಿಂದ ನಮ್ಮ ದೇಶಕ್ಕೆ ಸಂಚಾರ ಬಹಳ ಜಾಸ್ತಿಯಾಗುತ್ತಿದೆ. ಕೊಡಗಿನ ಕಾಡಿನಲ್ಲಿರತಕ್ಕ ಮರ, ಕಿತ್ತಳೆಯಹಣ್ಣು, ಕಾಫಿ ಇವೆಲ್ಲವೂ ಬೆಂಗಳೂರು-ಮಂಗಳೂರು ರಸ್ತೆಯೊಂದರ ಮಾರ್ಗವಾಗಿ ಬರಬೇಕಾಗಿದೆ. ಮೋಟಾರು ವಾಹನಗಳನ್ನು ನೋಡಿದರೆ, ಹತ್ತುವರ್ಷಗಳಿಂದೀಚೆಗೆ ಪ್ರತಿದಿನವೂ ನೂರಾರು ವಾಹನಗಳು ಮೈಸೂರಿನಿಂದ ಕೊಡಗಿಗೆ ಪ್ರತಿ ಹತ್ತು ನಿಮಿಷಕ್ಕೊಂದರಂತೆ ಹೋಗುತ್ತಿವೆ. ದಿವಸಕ್ಕೆ ಇನ್ನೂರು ಲಾರಿಗಳು ತಿರುಗುತ್ತವೆ. ಇಷ್ಟೊಂದು ವಿಪರೀತವಾಗಿ ಅಲ್ಲಿ ಸಂಚಾರ ಜಾಸ್ತಿಯಾಗಿದೆ.

ಕೇಂದ್ರದಲ್ಲಿ ನಮ್ಮ ಮೈಸೂರಿನವರೇ ಆದ ಒಬ್ಬರಲ್ಲ, ಇಬ್ಬರು ಮಂತ್ರಿಗಳಿರುತ್ತಾರೆ. ಈ ಹಿಂದೆ ಇಲ್ಲಿ ದಿವಾನರು ಇದ್ದ ಕಾಲದಲ್ಲಿ ಮೈಸೂರಿನಲ್ಲಿ ಕೃಷ್ಣರಾಜನಗರದ ಮಾರ್ಗವಾಗಿ ಎಂದರೆ ಹುಣಸೂರು ಮಾರ್ಗವಾಗಿ ಒಂದು ರೈಲ್ವೆ ಲೈನನ್ನು ಕೊಡಗಿಗೆ ತಾಕಿಸತಕ್ಕ ಬಗ್ಗೆ ಪ್ರಿಲಿಮಿನರಿ ಸರ್ವೆ ಸಹ ಮಾಡಿಸಿದ್ದು ಅನಂತರ ಆ ಕೆಲಸ ಮುಂದುವರಿಯದೇ ಹಾಗೆಯೇ ನಿಂತು ಹೋಗಿರುತ್ತೆಂದು ನಾನು ಕೇಳುತ್ತೇನೆ. ಈ ಲೈನು ತುಂಬ ಅವಶ್ಯಕವಾಗಿರುವುದರಿಂದ ಇದಕ್ಕಾಗಿ ಎಷ್ಟೇ ಖರ್ಚಾದರೂ ಚಿಂತೆಯಿಲ್ಲ, ಇದನ್ನು ಖಂಡಿತ ಏರ್ಪಡಿಸಿಕೊಡುವಂತೆ ಕೇಂದ್ರ ಸರ್ಕಾರದವರಿಗೆ ತಾವು ಒತ್ತಾಯಪಡಿಸಬೇಕೆಂದು ಹೇಳಿ, ಈ ಮಾನ್ಯ ಸಭೆಯವರು ದಯೆಯಿಟ್ಟು ಇದನ್ನು ಸರ್ಕಾರದವರು ಒಪ್ಪಿಕೊಳ್ಳುವಂತೆ ಒತ್ತಾಯಪಡಿಸಬೇಕೆಂದು ಪ್ರಾರ್ಥನೆ ಮಾಡಿ ನಾನು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved :

"This Assembly is of the opinion that the State Government should recommend to the Government of India to put a railway line to Coorg either from Mysore City or Krishnarajanagar."

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈಗ ಏನು ವಿಷಯಗಳನ್ನು ಈ ನಿರ್ಣಯದ ಮೂಲಕ ಮಾನ್ಯ ಸೂಚಕರು ಹೇಳಿದ್ದಾರೋ ಅವಲ್ಲದೆ ಕೆಲವು ಬೇರೆ ವಿಷಯಗಳೂ ಇವೆ. ಅವುಗಳನ್ನು ಮಾತ